ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ಆಯವ್ಯಯ/ಅಉಗೌಧ/14/2019-20

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 16 .02.2020

## ಸುತ್ತೋಲೆ

ವಿಷಯ: 2019-20ನೇ ಸಾಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸಿರುವ ಅತಿಥಿ ಉಪನ್ಯಾಸಕರ ಗೌರವಧನ ಪಾವತಿ ಕುರಿತು

ಉಲ್ಲೇಖ: 1.ಈ ಕಛೇರಿಯ ಪತ್ರ ಸಂಖ್ಯೆ:ಕಾಶಿಇ:ಆಯವ್ಯಯ:ಅಗೌಬಿ:05:2019-20 ದಿನಾಂಕ:29.01.2020

2.ಈ ಕಛೇರಿಯ ಪತ್ರ ಸಂಖ್ಯೆ:ಕಾಶಿಇ:ಆಯವ್ಯಯ:ಸುತ್ತೋಲೆ:ಸ.ಪ್ರ.ದ.ಕಾ:14:2019-20.ಬೆಂಗಳೂರು.ದಿನಾಂಕ:19.06.2019

********

2019-20 ನೇ ಶೈಕ್ಷಣಿಕ ಸಾಲಿಗೆ ಸಂಬಂಧಿಸಿದಂತೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸಿರುವವರಿಗೆ ಉಲ್ಲೇಖ(1)ರ ಸಮ ಸಂಖ್ಯೆಯ ಆದೇಶದನ್ವಯ ಅಕ್ಟೋಬರ್-19 ಮತ್ತು ನವೆಂಬರ್-19ರ ಮಾಹೆಯ ಗೌರವಧನ ಪಾವತಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು ಈ ಸಂಬಂಧ ಸದರಿ ಅವಧಿಯವರೆಗೆ ಮಾತ್ರ ಗೌರವಧನ ಪಾವತಿಸಲು ಸೂಚಿಸಿದೆ. ಈ ಅನುದಾನದಲ್ಲಿ ಹೆಚ್ಚುವರಿಯಾಗಿ ಉಳಿದ್ದಲ್ಲಿ ಬಳಸಿಕೊಳ್ಳದೇ ಈ ದಿನಾಂಕ:04.02.2020ರಂದು ನಡೆದ ವಿಡಿಯೋ ಸಂವಾದದಲ್ಲಿ ತಿಳಿಸಿರುವಂತೆ ಮಾಹಿತಿಯನ್ನು ಕೂಡಲೇ ಈ ಕಛೇರಿಗೆ ಸಲ್ಲಿಸಲು ಕಟ್ಟುನಿಟ್ಟಾಗಿ ಸೂಚಿಸಿದೆ. ತಾವು ಹೆಚ್ಚುವರಿಯಾಗಿ ಉಳಿದಿರುವ ಅನುದಾನವನ್ನು ಬಳಸಿಕೊಂಡಲ್ಲಿ ತಮ್ಮ ವಿರುದ್ಧ ಶಿಸ್ತು ಕ್ರಮಕೈಗೊಳ್ಳಲಾಗುವುದು.

ಮುಂದುವರೆದು 2018-19ನೇ ಸಾಲಿನ ಮಾರ್ಚ್-2019 ರಿಂದ ಮೇ-2019ರ ಅವಧಿಯ ಗೌರವಧನ ಪಾವತಿಗೆ ಸಂಭಂದಿಸಿದಂತೆ ಉಲ್ಲೇಖ (2)ರ ಈ ಕಛೇರಿಯ ಸುತ್ತೋಲೆಯಲ್ಲಿ ಇ.ಎಂ.ಐ.ಎಸ್. ಲೆಕ್ಕಚಾರ ಪಟ್ಟಿಯೊಂದಿಗೆ ಅವಶ್ಯವಿರುವ ಅನುದಾನದ ಮಾಹಿತಿಯನ್ನು ದಿನಾಂಕ:28.06.2019ರೊಳಗಾಗಿ ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿತ್ತು. ಕಾಲೇಜುಗಳಿಂದ ಸ್ವೀಕೃತವಾದ ಮಾಹಿತಿಯಂತೆ ಈ ಕಛೇರಿಯ ಸಮ ಸಂಖ್ಯೆಯ ದಿನಾಂಕ:29.07.2019 ಮತ್ತು 27.09.2019ರ ಆದೇಶದಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಆದರೆ ಕೆಲವೊಂದು ಕಾಲೇಜುಗಳು ಇ.ಎಂ.ಐ.ಎಸ್ ಲೆಕ್ಕಚಾರಪಟ್ಟಿ ಸಲ್ಲಿಸದ ಹಾಗೂ ತಡವಾಗಿ ಮಾಹಿತಿಯನ್ನು ಸಲ್ಲಿಸಿದ ಹಿನ್ನಲೆಯಲ್ಲಿ ಅನುದಾನವನ್ನು ಬಿಡಗುಡೆ ಮಾಡಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಅನುದಾನವನ್ನು ಕೋರಲ ಬೇಕಾದರೆ ಇ.ಎಂ.ಐ.ಎಸ್ ಲೆಕ್ಕಚಾರಪಟ್ಟಿಯನ್ನು ಕಡ್ಡಾಯವಾಗಿ ಸಲ್ಲಿಸಲು ಸೂಚಿಸಿದೆ. ಮಾಹಿತಿಯನ್ನು ಅಪೂರ್ಣವಾಗಿ ಸಲ್ಲಿಸುವುದು/ತಡವಾಗಿ ಸಲ್ಲಿಸಿ ಪದೇ ಪದೇ ಅನುದಾನ ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಿದ್ದಲ್ಲಿ ಸಂಬಂಧಪಟ್ಟವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಅಂತಿಮವಾಗಿ ಎಲ್ಲಾ ಪ್ರಾಂಶುಪಾಲರುಗಳಿಗೆ ಗಮನಕ್ಕೆ ತರಬಯಸುವುದೇನೆಂದರೆ, ಪ್ರತಿ ಮಾಹೆಯ ಅತಿಥಿ ಉಪನ್ಯಾಕಸರ ಇ.ಎಂ.ಐ.ಎಸ್. ಲೆಕ್ಕಚಾರಪಟ್ಟಿಯನ್ನು ಅಂತಿಮ ದಿನದ ನಂತರ ಪ್ರಿಂಟ್ ಪ್ರತಿಯನ್ನು ಪಡೆದು ಕಡತದಲ್ಲಿ ನಿರ್ವಹಣೆ ಮಾಡಲು ಕಟ್ಟುನಿಟ್ಟಾಗಿ ಸೂಚಿಸಿದ್ದು, ವ್ಯತ್ಯಾಸ/ಹೆಚ್ಚುವರಿ ಅನುದಾನ ಅವಶ್ಯವಿದ್ದಾಗ ಸದರಿ ಪ್ರತಿಯೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸದಿದ್ದಲ್ಲಿ ಅನುದಾನ ಬಿಡುಗಡೆ ಮಾಡಲು ಸಾಧ್ಯವಿರುವುದಿಲ್ಲವೆಂಬ ಅಂಶವನ್ನು ಎಲ್ಲಾ ಪ್ರಾಂಶುಪಾಲರಗಳ ಗಮನಕ್ಕೆ ತರಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

**ಇವರಿಗೆ.**

ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ

**ಪ್ರತಿಯನ್ನು.**

1. ಪ್ರಾದೇಶಿಕ ಜಂಟಿ ನಿರ್ದೇಶಕರು. ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರ್ಗಿ – ಮಾಹಿತಿಗಾಗಿ
2. ಕಛೇರಿ ಪ್ರತಿ.